Regd No BG 155 ಶ್ರೀ 7-11-1969

SATYAVADI Daily, MYSORE 4 ★★ 53 rd Year of Publication

ಸುವರ್ಣ ಮಹೋತ್ಸವ ನಡೆವೇರಿಸಿದ ಪತ್ರಿಕೆ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ದೆಹಲಿಯಲ್ಲಿ ಸಂಧಾನಪರ್ವಕ್ಕೆ ಪ್ರಯತ್ನ

ಧನ್ವಂತರಿ ಜಯಂತಿ

ಮೈಸೂರು ಶ್ರೀಮನ್ಮಹಾರಾಜರವರ ಸಂಸ್ಕೃತಮಹಾಪಾಠಶಾಲೆಯ ಆವರಣದಲ್ಲಿ ಈ ತಿಂಗಳು 16 ನೇ ತಾ|| ಸಂಜೆ 6 ಘಂಟೆಗೆ ಧನ್ವಂತರಿ ಜಯಂತೀ ಮಹೋತ್ಸವ ನಡೆಯಲಿರ್ಪಾಡಾಗಿವೆ. ರಾಜ್ಯ ವಿದ್ಯಾ ಇಲಾಖೆ ಜಂಟೀ ಡೈರೆಕ್ಟರ್ ಶ್ರೀ ಬಿ ಕೆ. ಸುರೇಭಾನ್ಕರ್ ಮುಖ್ಯ ಅತಿಥಿಗಳಾಗಿರುವರು:

★

ಮಂತ್ರಿಗಳ ಪಲಹೆ

ಸಹಕಾರ ಸಂಘಗಳು ರಾಜಕೀಯದಿಂದ ಸ್ವತಂತ್ರವಾಗಿರಬೇಕೆಂದು ಮಂತ್ರಿ, ಶ್ರೀ ಎಂ. ಶಂಕರರಾಯರು ಚಿಕ್ಕಬಳ್ಳಾಪುರದಲ್ಲಿ ತಿಳಿಸಿದರು.

●

ಬರೇ ಸಿಂಗ್‌ರ ಕರೆ

ವಿಶಾಲ ಹರಿಯಾಣಾ ಪಕ್ಷದ ಅಧ್ಯಕ್ಷ ಶ್ರೀ ಬರೇ ಸಿಂಗ್‌ರವರು ಚಂಡೀಘರದಲ್ಲಿ ಹೇಳಿಕೆಯನ್ನಿತ್ತು, ಈ ತಿಂಗಳು 24 ನೇ ತಾ|| ಒಳಗೆ ಚಂಡೀಘರ ಕುರಿತು ಷಾ ಆಯೋಗದ ವರದಿಯನ್ನು ಜಾರಿಗೆ ತರದಿದ್ದರೆ ರಾಜ್ಯ ಶಾಸನ ಸಭೆಯನ್ನು ವಿಸರ್ಜನೆ ಮಾಡಲು ತಾ|| 17 ರೊಳಗೆ ನಿರ್ಧರಿಸಲು ಕಾಂಗ್ರೆಸ್ ಸರ್ಕಾರಕ್ಕೆ ತಿಳಿಸಿರುವರು.

○

ಹಣ ವಶ

ಒಂದು ಟ್ರೇನಿನಲ್ಲಿ ಪ್ರಯಾಣ ಮಾಡುತ್ತಿದ್ದ ಇಬ್ಬರಿಂದ ಸುಂಕದ ಅಧಿಕಾರಿಗಳು ರೂ. 61 ಸಾವಿರ ವಶಪಡಿಸಿಕೊಂಡಿದೆಂದು ಪುಣೆಗೆ ವಾರ್ತೆ ಇದು ಅಕ್ರಮ ಸಾಗಾಣಿಕೆ ಪದಾರ್ಥಗಳ ಮಾರಾಟದ ಹಣವೆನ್ನಲಾಗಿದೆ.

● ನಾರುವಳ್ಳಿಯಲ್ಲಿ ಕಲ್ಲುಬೀರಿದ ವಿದ್ಯಾರ್ಥಿಗಳನ್ನು ಚದುರಿಸಲು ಪೋಲೀಸರು ಅಶ್ರುವಾಯು ಪ್ರಯೋಗಿಸಿದರು ಎಂದು ಹೈದರಾಬಾದ್ ವಾರ್ತೆ ತಿಳಿಸುತ್ತದೆ.

ಮುಷ್ಕರ

ಮದರಾಸಿನಲ್ಲಿ ಮೊನ್ನೆ ಹನ್ನೊಂದು ಮಂದಿ ಲಾ ಕಾಲೇಜು ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಿದುದರ ಪ್ರತಿಭಟನಾರ್ಥ ಲಾ ಕಾಲೇಜಿನ 740 ವಿದ್ಯಾರ್ಥಿಗಳು ಕಾಲೇಜಿಗೆ ಹೋಗಲಿಲ್ಲ.

○

ಅಕ್ರಮ ಗಡಿಯಾರ ವಶ

ಉತ್ತರ ಬೊಂಬಾಯಿನಲ್ಲಿ ಪ್ರಯಾಣೀಕನೋರ್ವನಿಂದ ರೂ. 25 ಲಕ್ಷದ ಅಕ್ರಮ ಸಾಗಾಣಿಕೆ ಗಡಿಯಾರವನ್ನು ಕೇಂದ್ರ ಸುಂಕದ ಇಲಾಖೆಯವರು ವಶಪಡಿಸಿಕೊಂಡರು.

★

ಶಿವಸೇನೆಯವರ ಆಯ್ಕೆ

ಥಾಣಾದ ನಲವತ್ತು ಸದಸ್ಯರ ಪೌರ ಸಭೆಗೆ ಶಿವಸೇನೆ ಬೆಂಬಲಿತ ಅಧ್ಯಕ್ಷ ಉಪಾಧ್ಯಕ್ಷರು ಚುನಾಯಿತರಾದರು.

★

ಗೋಪಾಲನ್ ಹೇಳಿಕೆ

ಸರ್ಕಾರಿ ಬಂಜರು ಭೂಮಿ ಎಲ್ಲೆಲ್ಲಿರುವುದೋ ಅವನ್ನೆಲ್ಲಾ ತನ್ನ ಪಕ್ಷದ ಕಾರ್ಯಕರ್ತರು ಆಕ್ರಮಿಸುವಂತೆ ಮಾರ್ಕ್ಸಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎ. ಕೆ. ಗೋಪಾಲ್ ತಿಳಿಸಿರುವರು.

★

ನಿಜಲಿಂಗಪ್ಪನವರಿಗೆ ಬೆಂಬಲ

ಮದರಾಸಿನಲ್ಲಿ ಸೇರಿದ್ದ ತಮಿಳುನಾಡು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಶ್ರೀ ನಿಜಲಿಂಗಪ್ಪನವರಿಗೆ ಬೆಂಬಲ ಕೊಡಲು ನಿರ್ಧರಿಸಿದೆ

★ ಮಹಾರಾಷ್ಟ್ರ ಕಾಂಗ್ರೆಸ್ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಬೆಂಬಲ ನೀಡಲು ನಿರ್ಧರಿಸಿರುವುದಾಗಿ ಡಿಡ್ವಾನಿನಿಂದ ಬಂದ ವಾರ್ತೆ ತಿಳಿಸುತ್ತದೆ.

ಗುರು ನಾನಕ್‌ರ 5ನೇ ಶತಮಾನೋತ್ಸವ

ನವದೆಹಲಿ— ಗುರು ನಾನಕ್‌ರವರ 5 ನೇ ಶತಮಾನೋತ್ಸವ ಸಂಬಂಧವಾಗಿ ತಾ| 22 ರಂದು ಭಾರಿ ಮನಮೋಹಕ ಮೆರವಣಿಗೆ ನಡೆಸಲು ಏರ್ಪಡಿಸಲಾಗುತ್ತಿದೆ — ಮೆರವಣಿಗೆಯಲ್ಲಿ 51 ಅಲಂಕರಿಸಲ್ಪಟ್ಟ ಆನೆಗಳೂ, 250 ಕುದುರೆಗಳೂ, 101 ಒಂಟಿಗಳೂ, 4 ಲಕ್ಷ ಜನರೂ ಇರುವರೆನ್ನಲಾಗಿದೆ.

★

ರೂ. 27 ಲಕ್ಷದ ಸತ್ಕಾರಕೂಟ

ಅಮೆರಿಕದ ಟ್ರಾಯ್‌ನ ಬ್ರಾಡ್ಲೆ ಮಾರ್ಟಿನ್ ದಂಪತಿಗಳು ನ್ಯೂಯಾರ್ಕಿನ ವಾಲ್ಡಾರ್ಫ್ ಹೋಟಲಿನಲ್ಲಿ 1896ರಲ್ಲಿ ಅತಿ ಖರ್ಚಿನ ಖಾಸಗಿ ಸತ್ಕಾರಕೂಟವೇರ್ಪಡಿಸಿದ್ದರು. ಅದರ ವೆಚ್ಚ 27.5 ಲಕ್ಷ ರೂಪಾಯಿಗಳು.

★

ಕೋಮುವಾರು ಪಕ್ಷಗಳು

ಕೋಮುವಾರು ಪಕ್ಷಗಳನ್ನು ಪ್ರತಿಬಂಧಿಸುವ ಯೋಜನೆಯನ್ನು ಮಂತ್ರಿಮಂಡಲ ಪರ್ಯಾಲೋಚಿಸಲಿದೆ. ನ್ಯಾಯಾಂಗ ಸಚಿವಾಲಯ ಮತ್ತೊಮ್ಮೆ ಪರಿಶೀಲಿಸಲಿದೆ. ನಿರ್ಧಾರವನ್ನು ಮುಂದೆ ಹಾಕಿದೆ.

● ಕಾರ್ ಅಪಘಾತಕ್ಕೀಡಾಗಿ ಕೆ ಆರ್ ಆಸ್ಪತ್ರೆಗೆ ಸೇರಿದ ಶ್ರೀ ಕೆ. ಹನುಮಂತಯ್ಯನವರು ಈಗ ಗುಣಮುಖರಾಗುತ್ತಿದ್ದಾರೆ.

ರಾಜಿಯಾದೀತೆ

ನವದೆಹಲಿ— ಪ್ರಧಾನಿ ಇಂದಿರಾರವರು ಮತ್ತು ಕಾಂಗ್ರೆಸ್ ಅಧ್ಯಕ್ಷ ನಿಜಲಿಂಗಪ್ಪನವರು ಇಂದು ಮಧ್ಯಾಹ್ನ ಭೋಜನಾನಂತರ ಮಾತುಕತೆ ನಡೆಸುವರು — ಪ್ರಧಾನಿಯವರು ಅಧ್ಯಕ್ಷರನ್ನು ಆಹ್ವಾನಿಸುವರು ಮೈಸೂರು ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ಸತತ ಪ್ರಯತ್ನದಿಂದ ಇದು ಸಾಧ್ಯವಾಯಿತೆಂದು ಗೊತ್ತಾಗಿದೆ.

★

ವಜ್ರ ವಶ

ಮದರಾಸು— ರೂ 25000 ಬೆಲೆಯ ವಜ್ರಗಳು ಮತ್ತು ಗಡಿಯಾರಗಳನ್ನು ಸಿಂಗಪುರದಿಂದ ವಿಮಾನದಲ್ಲಿ ಬಂದ ಒಬ್ಬ ಪ್ರಯಾಣೀಕನಿಂದ ಕಸ್ಟಂಸ್‌ರವರು ವಶಪಡಿಸಿಕೊಂಡರು.

★

ಭೂಸ್ವಾಮಿ ಮನೆ ಸುಟ್ಟರು

ನಾಗಪಟ್ಟಣ— ಪ್ರಳಾವನೂರಿನಲ್ಲಿ ಒಬ್ಬ ಭೂಸ್ವಾಮಿ ಮನೆಗೆ ಮಾರ್ಕ್ಸಿಸ್ಟರು ನುಗ್ಗಿ ಆತನನ್ನು ಕಂಭಕ್ಕೆ ಕಟ್ಟಿ ಮನೆಗೆ ಬೆಂಕಿ ಹತ್ತಿಸಿದರು — ಗಟಾಟಿ ಕಂಡ ನೆರೆಹೊರೆಯವರು ಅಗ್ನಿಪಾಲಾಗುತ್ತಿದ್ದ ಭೂಸ್ವಾಮಿಯನ್ನು ಬಿಡಿಸಿ ಆಸ್ಪತ್ರೆಗೆ ಸಾಗಿಸಿದರು.

★ ಬಾಣಬಿರುಸು ಅನಾಹುತದಲ್ಲಿ ಮದರಾಸಿನಲ್ಲಿ 5 ಮಂದಿ, ಹೈದರಾಬಾದಿನ ಹತ್ತಿರದಲ್ಲಿ 10 ಮಂದಿ ಸತ್ತರು.

ದಸರಾ ವಸ್ತುಪ್ರದರ್ಶನದಲ್ಲಿ
ವಿಶೇಷ ಮನರಂಜನೆ ಕಾರ್ಯಕ್ರಮ
ತಾ|| 8-11-1969 ಶನಿವಾರ
ಸಂಜೆ 7 ಘಂಟೆಗೆ
ಹುಬ್ಬಳ್ಳಿಯ ಶ್ರೀ ಗಾನಯೋಗಿ ಅರ್ಜುನ ಸಾಕೋಡೆ ಅವರಿಂದ
ಸಂಗೀತ
ಪ್ರವೇಶ ದರ 50. ಪೈಸೆ.

ಡಿಸೆಂಬರ್‌ನಲ್ಲಿ ಮಾತುಕತೆ

ಕಾವೇರಿ ನೀರಿನ ಪ್ರಶ್ನೆಯ ಬಗ್ಗೆ ಮೈಸೂರು ಮತ್ತು ತಮಿಳುನಾಡು ಮಂತ್ರಿಗಳ ಸಭೆ ಡಿಸೆಂಬರ್‌ನಲ್ಲಿ ನಡೆಯುವ ಸಂಭವವಿದೆ.

ಗೀತಾ ಮಂದಿರ ಶಂಕುಸ್ಥಾಪನೆ

ವಾರ್ಧಾ—ನಾಗ್ಪುರ ರಸ್ತೆಯ ಗೋಪುರಿಯಲ್ಲಿ ಜಮ್ನಾಲಾಲ ಬಜಾಜ್ ಟ್ರಸ್ಟಿಗಳವರು ನಿರ್ಮಿಸಲಿರುವ ಗೀತಾ ಮಂದಿರದ ಶಂಕುಸ್ಥಾಪನೆಯನ್ನು ಖಾ ಅಬ್ದುಲ್ ಗಫಾರ್ ಖಾ ನೆರವೇರಿಸಿದರು.

ಅರಮನೆ ಕೊಳ್ಳಲು ಮಾರ್ಕ್ಸಿಸ್ಟರ ಪ್ರಯತ್ನ

ತಿರುವಾಂಕೂರು ಮಹಾರಾಜರ ಅರಮನೆಯೊಂದನ್ನು ಇಪ್ಪತ್ತು ಲಕ್ಷ ರೂ.ಗೆ ತನ್ನ್ಮುಕಚೇರಿಗೋಸ್ಕರ ಕೊಳ್ಳಲು ಪ್ರಯತ್ನ ಮಾಡಿದರೆಂದು ಆದರೆ ಅದು ನಡೆಯಲಿಲ್ಲವೆಂದು ಕೇರಳ ಜನಸಂಘದ ಕಾರ್ಯದರ್ಶಿ ಶ್ರೀ ಓ ರಾಜಗೋಪಾಲ ಪಾಲ್ಘಾಟ ನಲ್ಲಿ ತಿಳಿಸಿದರು.

ಸ್ಫೋಟದಿಂದ ಸಾವು

ಶಿವಕಾಶಿಯಿಂದ ಬಂದಿರುವ ವಾರ್ತೆಯ ಪ್ರಕಾರ ಅಮ್ಮನಕೊಲ್ಲಿಪಟ್ಟಿಯ ಮನೆಯೊಂದರಲ್ಲಿ ಪಟಾಕಿ ಸಿಡಿದು 39 ವಯಸ್ಸಿನ ಜೋಸ್ವಾಮಿ ಎಂಬಾತ ಸತ್ತನು.

ಭಾರತ ಸರ್ಕಾರ ಉಕ್ಕಿನ ಆಮದನ್ನು ಸಡಿಲಗೊಳಿಸಲಿರುವುದಾಗಿ ನವ ದೆಹಲಿ ವಾರ್ತೆ.


ಈ ದಿನ ಮಾಡಬಹುದಾದ ಕಾರ್ಯವನ್ನು ನಾಳೆಗೆ ಏಕೆ ಇಡಬೇಕು?
ಒಂದು ಸಮಯೋಚಿತ ಕಾರ್ಯ
ನಾಳೆಗೆಂದು ಇಟ್ಟ ಕಾರ್ಯವನ್ನು ನೀವು ಮಾಡಿಮುಗಿಸಲು ಸಾಧ್ಯವಿದೆ ಮತ್ತು ಮರೆಯುವಿಕೆಯಿಂದಾಗಿ ಕೆಲವೊಮ್ಮೆ ಬಹಳ ನಷ್ಟಕ್ಕೆ ಕಾರಣವಾಗುತ್ತದೆ ಇದರಿಂದಾಗಿ ಕ್ಲೈಮ್‌ಗಳನ್ನು ಸಲ್ಲಿಸಲೂ ಆಗದ್ಯ ಎಲ್ಲವೂ ಹೋಯಿತಲ್ಲ ಎಂಬ ಭಯಸ್ಪದ ಸ್ಥಾಪಿತ ಏಳಾಪದ ಬದಲಾ ಪಗೆ... ಉತ್ತರಾಧಿಕಾರಿಯ ಹೆಸರು ಮುಂತಾದ ವಿವರಗಳು ಇದ್ದಿರುವುದರಿಂದಾಗಿ ಪ್ರತಿ ವರ್ಷ ಅನೇಕ ಕ್ಲೈಮ್‌ಗಳನ್ನು ಕ್ಷಿಪ್ರವಾಗಿ ಪಡೆಯಲು ಅನುಕೂಲವಾಗುತ್ತದೆ. ಆದುದರಿಂದ ಆಗಾಗ್ಗೆ ನಿಮ್ಮ ಪಾಲಿಸಿಯ ಕವಚವನ್ನು ಪರಿಶೀಲನೆ ಮಾಡಿರಿ. ಇಂದೇ ಮಾಡಿರಿ ಮತ್ತು ನಿಮ್ಮ ಪ್ರೀಮಿಯಮನ್ನು ಪ್ರತಿ ತಿಂಗಳು ಸಂಬಂಧಪಟ್ಟ ಆಫೀಸಿನಲ್ಲಿ ತಕ್ಕ ಸಮಯದಲ್ಲಿ ಕಟ್ಟಲು ಮರೆಯಬೇಡಿ.
ಜೀವ ವಿಮೆಗಿಂತ ಶ್ರೇಷ್ಠ ಉಳಿತಾಯ ಮತ್ತೊಂದಿಲ್ಲ

ವುಡ್‌ಲಾಂಡ್ ಜಯಪ್ರದ 5ನೇ ವಾರ
ಶಿ ನ ಅಮೋಘ ಪ್ರಾಕಂಪ್ಟ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮ್ಯಾನ್ ಕಲರ್ —
ಹಸೀನಾ ಮಾನ್ ಜಾಯೇಗಿ
ಶಶೀಕಪೂರ್ ಬಬೀತಾ ಜಾನೀವಾಕರ್
ಸಂಗೀತ : ಕಲ್ಯಾಣಜಿ ಆನಂದಜಿ
[ದಿನ ೩ ಪ್ರದರ್ಶನಗಳು]

ಆಪೆರಾ— ಅಮೋಘ 3 ನೇ ವಾರ
.... ಅತ್ಯಮೋಘ ತಮಿಳು ಚಿತ್ರ ....
ತುಣ್ಣೈವನ್
ನಾತ್ರ— ಎ.ವಿ.ಎಂ ರಾಜನ್, ಸಾಹುಕಾರ್ ಜಾನಕಿ, ಸುಂದರ್, ನಾಗೇಶ್
ನಿರ್ದೇಶನ : ಎಂ ಎಂ ತಿರುಮಂಗಂ
ದಿನ 3 ಆಟಗಳು

Help The Gorakshana

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿ ಜಾಸ್ತಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ಕೊಡಿ

Protect the Cow

Quality Printing — Neat Binding
Lakshminarasimha Press
Sivarampet. Mysore

Edited, Printed & Published by Dharmaprachara Nirata M S Krishna Rao (Proprietor at the Satyavadi Press Chamarajapuram, Mysore